the khuran ಎಂದು ಪ್ರಭುರಾವ್ ಹೇಳುತ್ತಿದ್ದಂತೆ ವಿದ್ಯಾರ್ಥಿಗಳೆಲ್ಲ ಎದ್ದು ನಿಂತು ತಪ್ಪಾಯಿತು ಗುರೂಜಿ ಎಂದು ಪ್ರಭುರಾವ್ ಅವರಿಗೆ ವಂದಿಸಿದರಂತೆ. ಪ್ರಭುರಾವ್ ಅಂದು ತಮ್ಮ ವಿದ್ಯಾರ್ಥಿಗಳೆಲ್ಲರಿಗೂ ಹದಿನೈದು ದಿವಸಗಳವರೆಗೆ ಹೃದಯದ ಬಗ್ಗೆಯೇ ಪಾಠ ಮಾಡಿದರಂತೆ. ಅಂಥ ಶ್ರೇಷ್ಠ ಗುರುಗಳು, ಉರ್ದು ಪಂಡಿತರಾಗಿದ್ದರು. ಅವರು ನಿಮ್ಮ ಊರವರೇ. ಈ ಕಾಲೇಜಿಗೆ ಅವರದೇ ಹೆಸರಿಟ್ಟಿದ್ದಾರೆ. ತಿಳಿತಾ! ಪ್ರಭುರಾವ್ ಅವರ ಶಿಷ್ಯರೇ ತನ್ವಾ ತಿಮ್ಮಾಪುರಿ ಈಗ ಪ್ರಸಿದ್ಧ ಲೇಖಕರಾಗಿದ್ದಾರೆ. ಇಷ್ಟಾಗುದರೊಳಗಾಗಿ ಯುಸೂಫ್ ಹುಸೇನ್ ತೀರಿಕೊಂಡು ಒಂದು ವರ್ಷ ಕಳೆದು ಅವರ ಪುಣ್ಯತಿಥಿ ಬಂದಿತು. ಊರವರು, ಕುಟುಂಬದವರು ಮರತೇ ಬಿಟ್ಟಿದ್ದರು. ಪ್ರಭುರಾವ್ ಮಾತ್ರ ಮರೆತಿರಲಿಲ್ಲ.

ಬೆಳಿಗ್ಗೆದ್ದು ಸಿಹಿತಿಂಡಿಗಳನ್ನು ಕಟ್ಟಿಕೊಂಡು ಹೂ ಹಾರಗಳನ್ನು ತೆಗೆದುಕೊಂಡು ಮೌಲ್ವಿಗಳ ಹತ್ತಿರ ಹೋಗಿ, 'ಮೌಲ್ವಿಗಳೆ ಇಂದು ನಮ್ಮ ಗುರುಗಳಾದ ಯುಸೂಫ್ ಹುಸೇನ ಅವರ ಪುಣ್ಯತಿಥಿ ಇದೆ. ಹೂ ಮಾಲೆಗಳನ್ನು ಅವರ ಸಮಾಧಿಗೆ ಅರ್ಪಿಸಲು, ಸಿಹಿ ಹಂಚಲು ತಮ್ಮ ಒಪ್ಪಿಗೆಬೇಕೆಂದು" ಪ್ರಭುರಾವ್ ಕೇಳಿದರು. ಮೌಲ್ವಿಗಳು ಯಾವುದಕ್ಕೂ ತಕರಾರು ಮಾಡದೆ, ಎಂಥ ಶಿಷ್ಯನಪ್ಪ ನೀನು, ಅವರ ಪುಣ್ಯ ದಿನ ನಾವೆಲ್ಲ ಮರತ್ತಿದ್ದೇವೆ. ನೀನು ಮರತಿಲ್ಲ. ಇದನ್ನು ನೀವು ಮಾಡಬಹುದು' ಎಂದು ಅನುಮತಿಸಿದರು. ಪ್ರಭುರಾವ್ ಪುಣ್ಯದಿನ ಮಾಡಿದರು. ಪ್ರಭುರಾವ್ ಬದುಕಿರುವವರೆಗೆ ಪ್ರತೀ ವರ್ಷ ಇದನ್ನು ಚಾಚೂ ತಪ್ಪದೆ ಮಾಡುತ್ತಿದ್ದರು...ಎಂದು ಹೇಳಿ ಮಾತುಮುಗಿಸುತ್ತಿದ್ದಂತೆ ವಿದ್ಯಾರ್ಥಿಗಳೆಲ್ಲ ಎದ್ದು, 'ಸಲಾಮ್ ಗುರೂಜಿ ಹಮೆ ಮಾಫಕರೋ ನಾವು ಏನೋ ತಿಳಿದು, ಕೆಟ್ಟದಾಗಿ ಯೋಚಿಸಿದ್ದೇವು' ಎಂದು ಅಪಾಲೋಜಿ ಕೇಳುವ ರೀತಿಯಲ್ಲಿ ಮಾತಾಡಿದರು.



'ನೋಡಿ ಭಾಷೆಗೆ ಜಾತಿ ಇಲ್ಲ, ಉರ್ದು, ಸಂಸ್ಕೃತ ಯಾವುದಾದರೂ ಅಷ್ಟೆ, ಯಾರೂ ಕಲಿಯಬಹುದು. ಇದು ಇಂಥ ಜಾತಿಯವರದು, ಇದು ಇಂಥ ಧರ್ಮದವರದು ಎಂದು ಯಾವ ಧರ್ಮ ಗ್ರಂಥಗಳೂ ಹೇಳಿಲ್ಲ. ದೇವನೊಬ್ಬ ನಾಮ ಹಲವು ಅನ್ನುವುದಿಲ್ಲವೆ? ಭಾಷೆ ಬಳಸಿದಷ್ಟು ಸಮೃದ್ಧಿಯಾಗುತ್ತದೆ. ಅದು ಪರಸ್ಪರರಲ್ಲಿ ಮಾಧ್ಯಮವಾಗಿ ಮಾತ್ರ ಬಳಕೆಯಾಗುತ್ತದೆ. ಇಂಗ್ಲಿಷ್ ಇಂಗ್ಲೆಂಡಿನದು ಎನ್ನುತ್ತೇವೆ. ಮೂಲದಲ್ಲಿ ಅದು ಟ್ರೈಬಲ್ಸ್‌ನವರು ಆಡುತ್ತಿದ್ದ ಭಾಷೆ. ಇಂದು ಜಗತ್ತೆಲ್ಲ ಇಂಗ್ಲಿಷ್‌ಮಯವಾಗಿಲ್ಲವೇ? ಭಾಷೆ ತನ್ನಷ್ಟಕ್ಕ ತಾನೇ ಮಡಿಯಾಗೊಲ್ಲ, ಮನುಷ್ಯರು ಅದರಲ್ಲಿ ಸಂಪ್ರದಾಯ, ಮಡಿವಂತಿಕೆ ಸೇರಿಸಿ ಬಿಡತೀವಿ. ಜಾತಿ-ಮಡಿವಂತಿಕೆಯಿಂದಲೇ ಸಂಸ್ಕೃತ ಮೃತ ಭಾಷೆಯಾಗುತ್ತಿಲ್ಲವೆ?' ಎಂದು ಪ್ರಕಾಶ ಹೇಳಿದರು.

'ನಾಳೆ ಕ್ಲಾಸು ಮುಂದುವರಿಸೋಣ' ಎಂದು ಹೇಳುತ್ತಿದ್ದಂತೆ, 'ಜನಾಬ್ ಹಮೆ ಮಾಫ್‌ಕರನಾ, ರಿಜರ್ವೇಷನ್ ಎಂದೆಲ್ಲ ಅಪಮಾನಸಿದೆವು. ಭೂಲ ಹೋಗಯಾ ಅಬ್ ಹಮಾರ ಆಂಖೆ ಖುಲ್‌ಗಯೆ' ಎಂದು ವಿದ್ಯಾರ್ಥಿಗಳೆಲ್ಲ ಪಶ್ಚಾತ್ತಾಪ ಪಟ್ಟುಕೊಂಡರು.

'ಆಗಲಿ' ಎಂದು ಗುರುಗಳು ತರಗತಿಯಿಂದ ಹೊರಗಡೆ ನಡೆದರು.

ವಿದ್ಯಾರ್ಥಿಗಳ ಕಣ್ಣಲ್ಲಿ ಪ್ರಕಾಶ ಎತ್ತರದ ವ್ಯಕ್ತಿತ್ವದವರಾಗಿ ಕಂಡರು. ತರಗತಿ ಹೊರಗಡೆ ನಿಂತು ಪ್ರಕಾಶ ಪಾಠ ಹೇಗೆ ಮಾಡುತ್ತಾರೆ ಎಂದು ಕೇಳಿಸಿಕೊಂಡ ಜವಾನ ಎದುರಿಗೆ ಬಂದು ಕೈಜೋಡಿಸಿ, 'ನಿನ್ನೆ ನಾನು ನಿಮಗೆ ಏನೇನೊ ಮಾತಾಡಿದೆ ದಯಮಾಡಿ ಕ್ಷಮಿಸಿ' ಎಂದು ಕೇಳಿಕೊಂಡ.

'ಇರಲಿ ಬಿಡಿ, ಬೇಸರಮಾಡಿಕೊಳ್ಳಬೇಡಿ' ಎಂದು ಪ್ರಕಾಶ ಹೇಳಿ ವಿಶ್ರಾಂತಿ ಕೋಣೆ ಕಡೆ ನಡೆದರು.

ರಜೆ ಬಂತು. ಪ್ರಕಾಶ ಊರಿಗೆ ಬಂದ ತಾಯಿ-ತಂದಿ, 'ಹೇಗಿತ್ತಪ್ಪ ನಿನ್ನ ಮೊದಲ ದಿನಗಳ ಪಾಠ ಪ್ರವಚನಗಳು' ಎಂದು ಕೇಳಿದರು.

'ತುಂಬ ತೃಪ್ತಿ ಇದೆಯಪಾ!' ಎಂದು ಹೇಳಿದ. ಮಗನ ಬಾಯಿಯಿಂದ ಬಂದ ಮಾತುಗಳಿಂದ ಕರ್ಣಾನಂದ ಪಡೆದ ಪ್ರಕಾಶನ ಅಪ್ಪ-ಅವ್ವ, 'ನಿನಗೆ ತೃಪ್ತಿ ಇದ್ದರೆ ಸಾಕಪಾ! ಸಾಕು' ಎಂದರು.

●